ಶ್ರೀ ಎಚ್. ಡಿ. ದೇವೇಗೌಡ.—ಬೃಹತ್ ನೀರಾವರಿ ಯೋಜನೆಗಳಿಂದ ಯಾವ ಯಾವ ಕ್ಷಾಮ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ದೊರಯುವುದಿಲ್ಲವೋ ಆ ಭಾಗಗಳಲ್ಲಿ ಅಂದರೆ ಪ್ರತಿ ಗ್ರಾಮದಲ್ಲಿಯೂ 10 ಬಾವಿಗಳನ್ನು ತೆಗೆಸುವ ಬಗ್ಗೆ ರಾಜ್ಯದ ನಚಿವ ಸಂಪುಟವು ತೀರ್ಮಾನ ತೆಗೆದುಕೊಂಡಿದೆ. ನಮ್ಮ ಹಾಸನ ಜಿಲ್ಲೆಯ ಅರಸೀಕೆರೆ, ಅರಕಲಗೂಡು, ಚನ್ನರಾಯಪಟ್ಟಣ ಮತ್ತು ಹೊಳೆನರಸಿಪುರ ತಾಲ್ಲೂಕುಗಳಲ್ಲಿ ಅನೇಕ ಬಾಗಗಳು ಆಗಾಗ್ಗೆ ಕ್ಷಾಮಕ್ಕೆ ತುತ್ತಾಗುತ್ತಿರುವದರಿಂದ, ಆ ಭಾಗಗಳಲ್ಲಿಯೂ ಸಹ ನೀರಾವರಿ ಬಾವಿಗಳನ್ನು ತೆಗೆಸಿ ಅಲ್ಲಿರುವ ರೈತರಿಗೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗತಾನೆ ನನಗೆ ಗೊತ್ತಾದ ಸಮಾಚಾರದ ಪ್ರಕಾರ ಹಾಸನ ಜಿಲ್ಲೆಯಲ್ಲಿ ಕೆಲವು ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ತೆಗೆದುಕೊಳ್ಳಲಾಗಿದೆ. ಅದರ ಜೊತೆಗೆ ಮಾನ್ಯ ನದಸ್ಯರು ಕೊಟ್ಟ ಸಲಹೆಯ ಬಗ್ಗೆ ಹೇಳುವುದಾದರೆ, ನೀರಾವರಿ ಬಾವಿಗಳನ್ನು ತೋಡಿಸುವ ಸಲುವಾಗಿ ಭೂಅಭಿವೃದ್ಧಿ ಬ್ಯಾಂಕಿನಿಂದ ಸಾಲ ಕೊಡಲಾಗುತ್ತದೆ. ಇದರ ಜೊತೆಗೆ ಭೂಗರ್ಭ ಅಧಿಕಾರಿಗಳ ನಲಹೆ ಪಡೆದು ಇನ್ನೂ ಹೆಚ್ಚು ಹೆಚ್ಚಾಗಿ ಯಾವ ಯಾವ ಪ್ರದೇಶಗಳಿಗೆ ಬಾವಿಗಳನ್ನು ತೋಡಿಸುವುದು ಸಾಧ್ಯ ಎಂಬುದನ್ನು ತಿಳಿದುಕೊಂಡು ಮಾಡಬೇಕಾದುದು ಸಹಜ. ಆದರಂತೆ ಮಾಡುವುದಕ್ಕೆ ಕಾರ್ಯಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಕ್ಷಾಮ ಪರಿಹಾರ ನಿಧಿಯಿಂದ ನಮ್ಮ ಹಾಸನ ಜಿಲ್ಲೆಗೆ ಈ ವರ್ಷ 30 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಒದಗಿಸಿದ್ದರು. ಆದರೆ ಕಳೆದ 8 ದಿವಸಗಳ ಹಿಂದೆ ಆ ಹಣದಲ್ಲಿ ವಿಭಾಗಾಧಿಕಾರಿಯವರು ಒಂಭತ್ತೂವರೆ ಲಕ್ಷ ರೂಪಾಯಿಗಳನ್ನು ವಾಪಸ್ ತೆಗೆದುಕೊಂಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಬತ್ತ ಒಂದನ್ನು ಬಿಟ್ಟು ಉಳಿದ ಯಾವ ಬೆಳೆಗಳೂ ಸಹ ಆಗಿಲ್ಲ. ಪರಿಸ್ಥಿತಿಯು ಸುಧಾರಿಸದೇ ಇದ್ದರೂ ಸಹ ಆ ಭಾಗಕ್ಕೆ ಕೊಟ್ಟಿರತಕ್ಕಂಥ ಹಣವನ್ನು ಸಹ ವಾಪಸ್ ಪಡೆದುಕೊಂಡು ಕೆಲಸಗಳನ್ನು ಅರ್ಧದಲ್ಲಿಯೇ ನಿಲ್ಲಿಸಿದ್ದು ಸರಿಯೇ? ಮುಕ್ಕ ಹಣವನ್ನು ಒದಗಿಸಿ ಜನರಿಗೆ ಕೆಲಸಗಳನ್ನು ಒದಗಿಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸಭೆಗೆ ಗೊರುತ್ತಿರುವಂತೆ ರಾಜ್ಯದ ದಕ್ಷಿಣ ಭಾಗಗಳಲ್ಲಿರುವ ಅಭಾವದ ಪ್ರದೇಶಗಳಿಗೆ ಜಿಲ್ಲಾಪಾರು ಇಷ್ಟಿಷ್ಟು ಎಂದು ಹಣವನ್ನು ಒದಗಿಸಿದ್ದು ನಿಜ. ಆದರೆ ಈ ಭಾಗಗಳ ಪೈಕಿ ಕೆಲವು ಕಡೆಗಳಲ್ಲಿ ಮಳೆ ಬಂದು ಪರಿಸ್ಥಿತಿ ಉತ್ತಮಗೊಂಡಿದ್ದರಿಂದ ಮತ್ತು ರಾಜ್ಯದ ಉತ್ತರ ಭಾಗದಲ್ಲಿನ ಪರಿಸ್ಥಿತಿ ತೀರ ಹದಗೆಟ್ಟಿದ್ದರಿಂದ, ದಕ್ಷಿಣ ಭಾಗಗಳಿಗೆ ಹಣ ಕೊಡುವುದನ್ನು ನಿಲ್ಲಿಸಿ ಉತ್ತರ ಭಾಗಗಳಿಗೆ ಹೆಚ್ಚು ಖರ್ಚು ಮಾಡಬೇಕಾಯಿತು.

BUS STAND AT BORGAON TOWN.

164. Sri J. S. AMMANNAVAR (Sadalga).—

Will the Minister for Labour be pleased to state :—

(*a*) the number of Mysore and Maharashtra State Transport buses that touch and stop at the Borgaon town in the Chikodi Taluk ;

(*b*) whether it has come to the notice of Government that there is heavy traffic on these routes touching Borgaon town ;

(*c*) whether there is any shelter or waiting room for the passengers at the bus stand ;

(*d*) if not, is there any proposal to construct the same ;

(*e*) whether they are aware that it is a fit place to have a Sub-Depot of the State Transport ?

Sri AZEEZ SAIT (Minister for Labour).—

(*a*) Twenty-four buses of Mysore State and 40 buses of Maharashtra State touch and stop at Borgaon town.

(*b*) Yes.

(*c*) No.

(*d*) Yes. The Town Panchayat Committee has been requested to allot a convenient site for construction of a Bus Stand. As soon as the site is handed over to Mysore State Road Transport Corporation, construction of a bus stand will be considered.

(e) There is no need for a Sub-Depot at Borgaon as the services are controlled well by Nippani and Chikodi Depots of Mysore State Road Transport Corporation and also by Ichalkaranji and Sangli Depots of Maharashtra State Transport Corporation.

ಶ್ರೀ ಬಿ. ಎಸ್. ಅಮ್ಮಣ್ಣವರ್.—ಒಂದು ಜಾಗದಲ್ಲಿ ಡಿಪೋ ಆಗಲಿ, ಇಲ್ಲವೇ ಸಬ್ ಡಿಪೊ ವನ್ನಾಗಲೀ ಮಾಡಬೇಕಾದರೆ ಅದಕ್ಕೆ ಇರಬೇಕಾದ ಅರ್ಹತೆಗಳೇನು ? ಅಂತಹ ಅರ್ಹತೆಗಳು ಈ ಬೊರಗಾಂವ್ ಟೌನ್‌ನಲ್ಲಿ ಇಲ್ಲವೇ ? ಏತಕ್ಕಾಗಿ ಇಲ್ಲಿ ವಿಚಾರಮಾಡುತ್ತಿಲ್ಲ ?

1-30. P.M.

ಶ್ರೀ ಅಜೀಜ್ ಸೇಟ್.—ಡಿಪೋ ಮಾಡಬೇಕಾದರೆ ಅಲ್ಲಿ ಎಷ್ಟು ಸಂಖ್ಯೆಯಲ್ಲಿ ಬಸ್ಸುಗಳು ಬರುತ್ತವೆ ಮತ್ತು ಇದಕ್ಕೆ ಸಾಕಾದಷ್ಟು ಜಾಗ ಇದೆಯೇ ಇಲ್ಲವೇ ಇದೆಲ್ಲವನ್ನೂ ಯೋಚನೆ ಮಾಡ ಬೇಕಾಗಿದೆ. ಬೋರಗಾಂವ್ ಟೌನಿನಿಂದ ಕೇವಲ 38 ಕಿಲೋಮೀಟರು ದೂರದಲ್ಲೇ ಒಂದು ಸಬ್ ಡಿಪೋ ಇರುವುದರಿಂದ ಇಲ್ಲಿಗೆ ಮತ್ತೆ ಒಂದು ಡಿಪೋವನ್ನು ಮಾಡುವುದಕ್ಕೆ ಅವಕಾಶವೇನೂ ಇಲ್ಲ.

ಶ್ರೀ ಪಿ. ಪಿ. ಹೆಗಡೆ.—ಬೋರ್ಡಗಾಂವ್ ಟೌನಿನಲ್ಲಿ ಒಂದು ಬಸ್ ಸ್ಟ್ಯಾಂಡು ಕಟ್ಟಬೇಕೆಂದು ಇಲ್ಲಿನ ಪಂಚಾಯತಿಯವರು ನಿರ್ಣಯ ಮಾಡಿ ಸರಕಾರದ ಕಡೆಗೆ ಕಳುಹಿಸಿದ್ದರೂ ಇಲ್ಲಿ ಒಂದು ಬಸ್ ಸ್ಟ್ಯಾಂಡನ್ನು ಇದುವರೆಗೆ ಮಾಡಲಾಗಲಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಅಜೀಜ್ ಸೇಟ್.—ಬಸ್ ಸ್ಟ್ಯಾಂಡ್ ಹೆಲ್ಮರು ಕಟ್ಟಬೇಕೆಂದು ನಿರ್ಣಯ ಬಂದಿದೆ. ಆದರೆ ಇನ್ನೂ ಜಾಗ ನಮ್ಮ ವಶಕ್ಕೆ ಬರಲಿಲ್ಲ. ಮಾನ್ಯ ಸದಸ್ಯರು ನಮಗೆ ಇಂದು ಜಾಗ ಪಂಚಾಯತಿ ಯವರ ಕಡೆಯಿಂದ ಮಾಡಿಸಿಕೊಟ್ಟರೆ ನಾಳೆ ದಿವಸವೇ ಇದರ ಕೆಲಸವನ್ನು ಪ್ರಾರಂಭ ಮಾಡಿಸುತ್ತೇನೆ

FIFTH FIVE YEAR PLAN

306. Sri M. S. KRISHNAN (Malleswaram).—

Will the Chief Minister be pleased to state :—

(*a*) whether the Government has drawn up the details in respect of the Fifth Five-Year Plan ;

(*b*) if so, the financial outlays involved and the ways and means position ;

(*c*) the special features of the plan with reference to the Developmental projects in particular ;